ಓ.ಎಸ್. ನಂಃ 40/2018

ಡಿ.ಡಬ್ಲ್ಯೂಃ 1

**ದಿನಾಂಕ 12.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಕೆ.ಎನ್. ವಕೀಲರಿಂದಃ**

12. ಬೋರನಾಯಕರವರು ನಿಮ್ಮ ವಿರುದ್ಧ ಅಮಲು ಜಾರಿ ಪ್ರಕರಣ ಸಂಖ್ಯೆ 132/2018 ರ ಪ್ರಕಾರ ಹೂಡಿದ್ದು, ಸದರಿ ಪ್ರಕರಣದ ಮೊತ್ತವಾದ 1,55,573/- ರೂಪಾಯಿಯನ್ನು ನೀವು ಸಂಪೂರ್ಣವಾಗಿ ಬೋರನಾಯಕರವರಿಗೆ ಪಾವತಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

13. ಬೋರನಾಯಕರವರು ನಿಮ್ಮ ವಿರುದ್ಧ ಹೂಡಿದ್ದ ಸಿ.ಸಿ. 257/2021 ರ ಪ್ರಕರಣದಲ್ಲಿ ನಿಮಗೆ ಖುಲಾಸೆ ಆಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ನಾನು ಬೋರನಾಯಕರವರಿಂದ 2 ಲಕ್ಷ ರೂಪಾಯಿ ಸಾಲವನ್ನು ಪಡೆದಿದ್ದೆ. ನೀವು ಸಿ.ಸಿ. 257/2021 ರ ಪ್ರಕರಣದಲ್ಲಿ ಬೋರನಾಯಕರವರಿಂದ 60,000/- ರೂಪಾಯಿ ಸಾಲವನ್ನು ಪಡೆದಿರುತ್ತೀರಿ ಎಂದು ನ್ಯಾಯಾಲಯದಲ್ಲಿ ಹೇಳಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಸದರಿ ಬೋರನಾಯಕರವರಿಗೂ ಮತ್ತು ಈ ದಾವೆಯ ವ್ಯವಹಾರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಕೊಡಬೇಕಾದ ಸಾಲದ ಹಣವನ್ನು ಪಾವತಿಸಲು ತಪ್ಪಿಸುವ ಉದ್ದೇಶದಿಂದ ನಾನು ಮತ್ತು ಬೋರನಾಯಕ ಶಾಮಿಲಾಗಿ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ಈ ದಾವೆಯಲ್ಲಿ ಕೇಳಿರುವ ಮೊತ್ತವನ್ನು ಪಾವತಿಸಲು ಬಾಧ್ಯಸ್ತನಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**

**ನ್ಯಾಯಾಧೀಶರು, ಕೆ.ಆರ್.ನಗರ.**